ರಮೇಶ ಜ. ಬೊಂಗಾಳೆ, ಬೈಲಹೊಂಗಲ
ಸಮುದ್ರಕ್ಕೆ ಅಲೆಗಳು ಚಂದ. ನಮ್ಮ ಜೀವನಕ್ಕೆ?



ಸಮುದ್ರದಾಚೆಗೂ ಅಲೆದಾಟ ಚಂದ.

ಬಿ. ಬಸವರಾಜ್, ಹರಿಹರ
ತಾಯಿ ಇಲ್ಲದ ತಬ್ಬಲಿ ಎನ್ನುವಂತೆ ತಂದೆ ಇಲ್ಲದ ತಬ್ಬಲಿ ಎನ್ನುವುದಿಲ್ಲ, ಏಕೆ?
ತಾಯಿ ಬೇರು. ತಂದೆ ಮರ. ಮರ ಕಡಿದರೂ ಬೇರಿದ್ದರೆ ಚಿಗುರು ಸಾಧ್ಯ.

ಮುರಲೀಧರ ಕುಲಕರ್ಣಿ, ಬೀದರ್
ಸತ್ಪಾತ್ರರಿಗೆ ದಾನ ಮಾಡಬೇಕೆನ್ನುತ್ತದೆ ಧರ್ಮಶಾಸ್ತ್ರ. ಆದರೆ ಮತದಾನಕ್ಕೆ ಸತ್ಪಾತ್ರರೇ ದೊರಕರಲ್ಲಾ?
ಆಮಿಷಗಳಿಗೆ ತುತ್ತಾಗದ ಮತದಾರರು ಹೆಚ್ಚಿದರೆ ಸತ್ಪಾತ್ರರು ಕಂಡುಬರುವರಂತೆ.

ಆದಿನಾರಾಯಣಮುನಿ, ಕೊಳ್ಳೇಗಾಲ
ನೆನಪಿನ ದೋಣಿಯಲ್ಲಿ ನದಿ ದಾಟಲು ಸಾಧ್ಯವೆ?



ವೃದ್ಧಾಪ್ಯವೆಂಬ ಸಾಗರವನ್ನು ದಾಟಿ ದಡ ಸೇರುವುದೇ ಆ ದೋಣಿಯಲ್ಲಿ.

ಆರ್. ಮಧುಸೂದನ್, ಹಾಸನ
ಅನೈತಿಕ ಸುದ್ದಿಗಳನ್ನು ವೈಭವೀಕರಿಸಿ ತೋರಿಸುವ ಸುದ್ದಿ ಮಾಧ್ಯಮಗಳಿಗೆ ನೈತಿಕತೆ ಇದೆಯೆ?
'ನೈತಿಕತೆ ಟಿಆರ್‌ಪಿಯ ಶತ್ರು. ನಮಗೆ ಟಿಆರ್‌ಪಿಯೇ ದೇವರು' ಎಂದಿತಂತೆ ಮಾಧ್ಯಮ.

ಕೆ.ವಿ. ಮಂಜುನಾಥ್, ಕೆ.ಟಿ.ಹಳ್ಳಿ
ಹಾವಿಗೆ ಹಾಲನೆರೆದರೆ ಏನು ಫಲ ಗುರುವೆ?
ಗೌಳಿಗನಿಗೆ ವ್ಯಾಪಾರವೃದ್ಧಿ.

ಪಿ.ಎನ್. ಶ್ರೀವತ್ಸ, ಬೆಂಗಳೂರು
ಒಂದೊಂದು ಮನೆಯಲ್ಲಿ ಒಂದೊಂದೇ ಒಲೆ ಉರಿಯುವುದೂ ಇತ್ತೀಚೆಗೆ ಕಡಿಮೆಯಾಗುತ್ತಿರಲು ಕಾರಣ?
ಸಮಯಾಭಾವದಿಂದ ಬರ್ನರ್ ಕ್ಲೀನ್ ಮಾಡಿರುವುದಿಲ್ಲವಂತೆ.

ಸವಿತಾ ರವಿ ಸುಟ್ಟಟ್ಟಿ, ಬನಹಟ್ಟಿ
ಹೆಣ್ಣು ನೋಡಾಕ ಬಂದಾಗ ಹೆಣ್ಣಿನ ಎಡಗೈಯನ್ನೇ ಏಕೆ ನೋಡ್ತಾರೆ?
ಮೊಬೈಲ್‌ನ ಇಂಪ್ರೆಷನ್ ಎಷ್ಟು ಆಳವಾಗಿ ಮೂಡಿದೆಯೆಂದು ನೋಡಲು.

ಬಿ.ಚಂದ್ರೇಗೌಡ, ಬೆಂಗಳೂರು
'ಪದ ಕುಸಿಯೆ ನೆಲವಿಲ್ಲ' ಎಂದರೆ ಏನರ್ಥ?
ನೀವು ದೋಣಿಯ ತುದಿಯಿಂದ ನೀರಿಗೆ ಜಾರಿದ್ದೀರೆಂದು.

ಶ್ರುತಿ ರಿಗ್ರೆಟ್ ಅಯ್ಯರ್, ಅಮೆರಿಕ
ಮೊಬೈಲ್ ಕೈಲಿ ಇದ್ದರೆ ಸತ್ಯಕ್ಕಿಂತ ಸುಳ್ಳೇ ಏಕೆ ಮಾತನಾಡುತ್ತಾರೆ?
ಏಕೆಂದರೆ ಸತ್ಯ ಸ್ಟೇಷನರಿ (ಸ್ಥಿರ), ಸುಳ್ಳು ಮೊಬೈಲ್.

ಮಂಡಿ ಕುಮಾರ್, ಬೆಂಗಳೂರು
ನಾವೇ ಮತ ಹಾಕಿ ಗೆಲ್ಲಿಸುವ ನಾಯಕರನ್ನು ನಾವೇ ಬಯ್ಯುವುದೇಕೆ?
ಕಾಯೋ ನಾಯೀಂತ ತಂದ್ರೆ ಕಚ್ಚೋ ನಾಯಿ ಆದ್ರೆ ಇನ್ನೇನ್ಮಾಡಕ್ಕಾಗತ್ತೆ!

ಪಿ. ಶಂಕರಪ್ಪ, ಶಿವಮೊಗ್ಗ
ಇಂದು ಮುಗ್ಧ ಜನರ ದಾರಿ ತಪ್ಪಿಸುತ್ತಿರುವವರು ಯಾರು?
ಪಿಎಂ! (P—Politics; M—Media)

ನರಸಿಂಹ ಪೈ, ಕಾಸರಕೋಡ
ಮಳೆಗೂ, ಮಹಿಳೆಗೂ ಸಾಮ್ಯತೆ ಏನು?
ಹರಿದೆಡೆಯೆಲ್ಲ ಉಲ್ಲಾಸ ತುಂಬುವ ಗುಣ.

ಮಹಾವೀರ ಕಾಸರ, ಶಿವಮೊಗ್ಗ
ಆಭರಣ ಜಾಹೀರಾತು ನೀಡುವ ಸೆಲಿಬ್ರಿಟಿಗಳ ಮೈಮೇಲೆ ಒಂದೂ ಆಭರಣ ಇರುವುದಿಲ್ಲವಲ್ಲ?
ಶೂಟಿಂಗ್ ಸಮಯದಲ್ಲಿ ಇಲ್ಲದ ಚೈನ್ ಸ್ನ್ಯಾಚರ್ ಭಯ ನಂತರ ಇರುವುದಂತೆ.

## ಬಹುಮಾನಿತ ಪ್ರಶ್ನೆ

ಜಗದೀಶ ಬಿ. ಹೊಸೂರು, ಮೈಸೂರು
ವರಿಸಲು ಹುಡುಗಿ ಹೇಗಿರಬೇಕೆಂದಾಕ್ಷಣ ಸುಂದರವಾಗಿರಬೇಕೆಂಬುದೇ ಮೊದಲ ಉತ್ತರ. ಏಕೆ?
ಫೋಟೊಶೂಟನ್ನು ಮೇಕಪ್ ಖರ್ಚಿಲ್ಲದೆ ಮುಗಿಸಬಹುದೆಂದು.

ಎನ್. ವೈದೇಹಿ ಶೇಖರ್, ಮೈಸೂರು
ಮುಳುಗುತ್ತಿರುವ ಸಂಸಾರ ಮತ್ತು ಹಡಗನ್ನು ತಡೆಹಿಡಿಯಲು ಸಾಧ್ಯವೆ?
ಮುಳುಗದಂತೆ ಹಗುರಾಗಿಸಲು ಸಮರ್ಥವಾದ ಕೈಗಳು ಸಿಕ್ಕರೆ ಸಾಧ್ಯ.

ಜಯತೀರ್ಥ ಶ್ರೀಪತಿ, ಹುಬ್ಬಳ್ಳಿ
ಉನ್ನತಿಗೂ, ಸದ್ಗತಿಗೂ ವ್ಯತ್ಯಾಸವೇನು?
ಹಂತವಾಗಿ ಏರಿದರೆ ಉನ್ನತಿ; ಅಂತವಾಗಿ ಏರಿದರೆ ಸದ್ಗತಿ.

ಮಲ್ಲಿಕಾರ್ಜುನ ಹ. ಬಗಲಿ, ಜತ್ತ
ಕಣ್ಣೀರು ಹಾಕುವುದರಲ್ಲಿ ಹೆಣ್ಣುಮಕ್ಕಳು ಎತ್ತಿದ ಕೈ ಎಂದೇಕೆ ಹೇಳುವರು?



ಏಕೆಂದರೆ ಅವರಲ್ಲಿ ಕಣ್ಣೀರು ಹೊಮ್ಮಿಸುವುದರಲ್ಲಿ ಗಂಡುಮಕ್ಕಳದು ಎತ್ತಿದ ಕೈ, ಎತ್ತಿದ ಕಂಠ.

ಕಾವ್ಯಶ್ರೀ, ಶೋರಾಪುರ
ಆತ್ಮ ಪರಮಾತ್ಮ ಆಗುವುದು ಯಾವಾಗ?
ಪರರಿಗಾಗಿ ಬದುಕಿದಾಗ.

ಎಸ್ಸೆನ್ ಮಹಾಬಲರಾವ್, ಎನ್ನರ್ಪುರ
ಉಪ್ಪಿಟ್ಟು, ಕೇಸರಿಬಾತ್, ವಡೆ, ಪಲಾವುಗಳ ನೈವೇದ್ಯ ನಡೆಯಿತಲ್ಲ...?
ಅಳಿಯದೇವರು ತೃಪ್ತನಾದನಂತೆ.

■ ರಾಮ್